ಓ ಎಸ್ ನಂ.132/2024
ಪಿ.ಡಬ್ಲ್ಯೂ-1 ಭಾರತಿ ತಂದೆ ಶಶಿಕಾಂತ ಸಲಗರ

**(ಇಂದು ದಿನಾಂಕಃ 24-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

೧ನೇ ವಾದಿಯ ಅಜ್ಜನ ಹೆಸರು ಬೋಜಪ್ಪ ಎಂದರೆ ಸರಿ. ಸದರಿ ಬೋಜಪ್ಪರವರಿಗೆ ಭೀಮರಾಯ, ಯಶವಂತ ಮತ್ತು ಸುಂದರವ್ವ ಎಂಬ ೩ ಜನ ಮಕ್ಕಳು ಇರುತ್ತಾರೆ. ಭೀಮರಾಯನ ಹೆಂಡತಿಯ ಹೆಸರು ಹೂವಕ್ಕ ಎಂದರೆ ಸರಿ. ಭೀಮರಾಯನು ಸುಮಾರು ೫೦ ವರ್ಷಗಳ ಹಿಂದೆ ಮೃತರಾಗಿರುತ್ತಾರೆ ಎಂದರೆ ಸರಿ. ಹೂವಕ್ಕರವರು ೨೦೦೩ ರಲ್ಲಿ ಮೃತರಾಗಿರುತ್ತಾರೆ. ನಮ್ಮ ತಾಯಿ ದುಂಡವ್ವರವರು ೧೯೯೦ ರಲ್ಲಿ ಮದುವೆ ಆಗಿರುತ್ತದೆ. ನಮ್ಮ ತಾಯಿಯನ್ನು ಬಾಸಗಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ನಮ್ಮ ತಾಯಿ ಈಗ ನಮ್ಮ ಅಜ್ಜಿ ಮನೆಯಾದ ಶೇಷಗಿರಿಯಲ್ಲಿ ವಾಸವಿರುತ್ತಾರೆ.

೨. ಬೋಜಪ್ಪರವರಿಗೆ ೧೦ ಎಕರೆ ಒಣಬೇಸಾಯ ಜಮೀನು ಇತ್ತು ಮತ್ತು ನೀರಾವರಿ ಇದ್ದ ೩ ವರೆ ಎಕರೆ ಜಮೀನು ಮುಳುಗಡೆ ಆಗಿರುತ್ತದೆ. ಮುಳುಗಡೆಯಾದ ಜಮೀನು ಭೀಮರಾಯರವರಿಗೆ ಬಂದಿತ್ತು ಎಂದರೆ ಸಾಕ್ಷಿಯು ಅದು ಮತ್ತು ಒಣಬೇಸಾಯದ ೪ ಎಕರೆ ಜಮೀನು ಭೀಮರಾಯರವರಿಗೆ ಬಂದಿತ್ತು ಎನ್ನುತ್ತಾರೆ. ಮುಳುಗಡೆಯಾದ ಜಮೀನಿನ ಸರ್ವೆ ನಂಬರ ೧೯೮ ಇರುತ್ತದೆ. ಸದರಿ ಮುಳುಗಡೆಯಾದ ಜಮೀನಿನ ಕುರಿತು ದಾವೆಯಲ್ಲಿ ನಾನು ತಿಳಿಸಿಲ್ಲ. ಸರ್ವೆ ನಂಬರ ೩೧ ರ ಜಮೀನು ೧ನೇ ಪ್ರತಿವಾದಿ ಯಶವಂತರವರ ಹೆಸರಿನಲ್ಲಿ ಇರುತ್ತದೆ. ಸರ್ವೆ ನಂಬರ ೧೩೧/೧ ರ ಜಮೀನೂ ಕೂಡಾ ೧ನೇ ಪ್ರತಿವಾದಿ ಯಶವಂತರವರ ಹೆಸರಿನಲ್ಲಿ ಇರುತ್ತದೆ. ೧೯೭೮ ರಲ್ಲಿ ೧ನೇ ಪ್ರತಿವಾದಿ ದಾವಾ ಆಸ್ತಿಗಳನ್ನು

ತನ್ನ ಹೆಸರಿನಲ್ಲಿ ಮಾಡಿಕೊಂಡಿರುತ್ತಾರೆ. ೨೦೦೪ ರಲ್ಲಿ ಸದರಿ ವಿಚಾರ ನಮಗೆ ಪಹಣಿಗಳನ್ನು ತೆಗೆಸಿದಾಗ ಗೊತ್ತಾಗಿರುತ್ತದೆ. ನಾನು ಕಂದಾಯಾಧಿಕಾರಿಗಳನ್ನು ೧ನೇ ಪ್ರತಿವಾದಿಯ ಹೆಸರನ್ನು ಹೇಗೆ ಜಮೀನುಗಳು ಆಗಿವೆ ಎಂದು ವಿಚಾರಣೆ ಮಾಡಿರುವುದಿಲ್ಲ. ಸರ್ವೆ ನಂಬರ ೧೯೮/೧ ಜಮೀನು ನನ್ನ ಅಜ್ಜಿ ಹುಚ್ಚಕ್ಕನ ಹೆಸರಿನಲ್ಲಿ ಇತ್ತು ಮತ್ತು ದಾವಾ ಜಮೀನುಗಳು ೧ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದು, ಅವು ಅವರವರ ಪಾಲಿಗೆ ಬಂದು ಅವರೆ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ದಾವಾ ಆಸ್ತಿಗಳು ಪಾಲು ಆಗಿದ್ದರೂ ಸಹ ನಾವು ಈಗ ಒಂದು ಸುಳ್ಳು ಕೇಸನ್ನು ಹಾಕಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.